ಪದಬಂಧ




**ಎಡದಿಂದ ಬಲಕ್ಕೆ**

1. ಅಂದವಾದ ಕಲಾಕೃತಿಗಳನ್ನು ನೋಡಿದರೇ ಸಂತೋಷ 3
3. ಕೆಟ್ಟ ಪರಿಮಳದ ಬಳಕೆಯಿಂದ ಭಾರೀ ತಪ್ಪಾಯಿತು 3
4. ಶಾಮಣ್ಣನ ಕಷ್ಟಗಳೆಲ್ಲ ಕಡೆಗೂ ಪರಿಹಾರವಾಯಿತು 3
6. ಎಷ್ಟು ಖರ್ಜೂರ ಪ್ರಿಯ ನೋಡಿ ಈ ಮಡಿವಾಳ 3
7. ಮತ್ತೆ ಹೊನ್ನನ್ನು ಸಂಪಾದಿಸಿದ ಸಾಧನೆ ಅತ್ಯಂತ ಎತ್ತರದ್ದು 4
9. ಮತ್ತೆ ಮತ್ತೆ ಕುಕ್ಕುವಂತಹ ಚುಚ್ಚು ನುಡಿ 4
11. ಗಣಿ ಕೆಲಸದವನಾದರೂ ಆತ ಎಲ್ಲರಿಗೂ ಒಳ್ಳೆಯ ಸ್ನೇಹಿತ 4
13. ಕ್ಷಣದಲ್ಲೇ ಜಲದಲ್ಲಿ ಮುಳುಗೆದ್ದವರು ನೂರು ಸಾವಿರ ಮನುಷ್ಯರು 4
15. ಭುಜದ ಮೇಲೆ ಹೊತ್ತು ತಂದಿದ್ದಾನೆ ನೋಡಿ, ಅದು ತಾವರೆ 3
17. ರಾಕ್ಷಸರಿಂದ ಕಿತ್ತು ತಂದದ್ದು ಇಲ್ಲಿ ಭದ್ರ ಕಾವಲಿನಲ್ಲಿದೆ 3
18. ಕ್ರೂರ ಕಾರ್ಯಗಳನ್ನು ಮಾಡಿದವನಿಗೆ ಸಿಕ್ಕಿದ್ದು ಘೋರ ಶಿಕ್ಷೆಗಳ ತಾಣ 3
19. ಸರಸದ ಮಾತುಗಳನ್ನಾಡಲೂ ರುಚಿ ತಿಳಿಸುವ ನಾಲಿಗೆಯೇ ಬೇಕಲ್ಲ? 3

**ಮೇಲಿನಿಂದ ಕೆಳಕ್ಕೆ**

1. ಅಧ್ಯಯನಕ್ಕೆ ಬಂದವರೆಂದರೆ ಅಲ್ಲಿ ತುಂಬ ಗೌರವ 3
2. ಪತ್ತೆಯಾದ ದೋಷಗಳ ಸಂಖ್ಯೆ ಹತ್ತನ್ನು ತಲುಪಿತು 3
3. ಸ್ವಚ್ಛ ಪರಿಸರವನ್ನು ಕಂಡೊಡನೆ ಎಲ್ಲರೂ ಶಾಂತ 3
5. ಕುಸುಮ ಸಂಗ್ರಹಣಾ ಕೆಲಸ ಆರಂಭವಾದಾಗ ಇನ್ನೂ ಮುಂಜಾನೆ 3
7. ಬೇಸಿಗೆಯನ್ನು ನೆನೆದರೆ ಮನಸ್ಸಿಗೂ ತಟ್ಟೀತು ಬಿಸಿ 4
8. ತರಕಾರಿಗಳ ಬೆಲೆ ಕೇಳಿದರೇ ಭಯದ ನಡುಕ 4
9. ಆತ ಕುಂಚಕಲೆಯನ್ನು ಕಲಿತದ್ದು ಸ್ವಲ್ಪ ಸಮಯ ಅಷ್ಟೇ 4
10. ಆ ದಿರಿಸನ್ನು ತಂದು ಸರಿಪಡಿಸಲು ಬೇಕೇ ಬೇಕು ಕೆಲವು ದಿವಸ 4
12. ತಕರಾರನ್ನು ಹಿಂದೆಗೆಸಲು ಏಕಿಂಥ ಆತುರ? 3
14. ಕಾಣಿಕೆ ನೀಡಿದ ಸಂತಸ ಅತ್ಯಲ್ಪ ಕಾಲದ್ದು 3
15. ಅನ್ಯರಿಂದ ತಂದ ವಸ್ತುಗಳಿಗಿರುವ ವ್ಯತ್ಯಾಸ ಏನು? 3
16. ನಂಜನ್ನು ನಿವಾರಿಸುವ ಹೊಸ ವಿಧಾನದ ಹುಟ್ಟು 3

## 27—04—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಷ್ಟವಿಧ 3. ಕಮರಿ 4. ನಿಶಾನೆ 6. ಅಮಾಯಕ 8. ಬಳುವಳಿ 10. ಮಹನೀಯ 12. ರಸಪಾಕ 16. ಸುಮ್ಮಾನ 17. ಗಟಾರ 18. ಕಲಾವತಿ

**ಮೇಲಿನಿಂದ ಕೆಳಕ್ಕೆ**

1. ಅರಿಕೆ 2. ಧನಿಕ 3. ಕಲಾಯ 5. ನೆರಳು 6. ಅನುಪಮ 7. ಕರಿಭಯ 8. ಬಡಿವಾರ 9. ಳಿವರಾಕ (=ಕರಾವಳಿ ತಲೆಕೆಳಗು) 11. ನೀಗಿಸು 13. ಸಮೀರ 14. ಕನಕ 15. ಪ್ರಗತಿ

ಪ್ರಶ್ನಾಂಕಣ

# ಕಡಲಿನ ಅಡವಿ: ಏನು ವಿಶೇಷ?

ಸಾಗರಾವಾರದಲ್ಲಿ, ಕಡಲಂಚಿನ ಸನಿಹಗಳಲ್ಲಿ, ಸೂರ್ಯನ ಬೆಳಕು ತಲುಪುವಷ್ಟೇ ಆಳಗಳಲ್ಲಿ, ನೀರಲ್ಲಿ ತೇಲುತ್ತ ಅಥವಾ ಮುಳುಗಿ ಉಳಿದು ದಟ್ಟವಾಗಿ ಬೆಳೆದು ನಿಂತ ಸಾಗರ ಶೈವಲಗಳ (ಸೀ ಆಲ್ಗೇ) ಆಚ್ಛಾದಿತ ಪ್ರದೇಶಗಳೇ ಕಡಲಿನ ಅಡವಿಗಳು (ಚಿತ್ರಗಳಲ್ಲಿ ಗಮನಿಸಿ). ಕಡಲ ಕಳೆಗಳು (ಸೀ ವೀಡ್ಸ್) ಎಂದೂ ಕರೆಯಲ್ಪಡುವ ಈ ಸಸ್ಯಗಳ ಅರಣ್ಯಗಳದು ನೆಲದ ಮೇಲಿನ ಅರಣ್ಯಗಳಂತೆಯೇ ಬೃಹತ್ ವೈಶಾಲ್ಯ; ಅಪಾರ ಪಾರಿಸರಿಕ ಮಹತ್ವ. ಆಸ್ಟ್ರೇಲಿಯನ್ ವಿಜ್ಞಾನಿಗಳು ಕೈಗೊಂಡಿದ್ದ, ಇತ್ತೀಚೆಗಷ್ಟೇ ಪೂರ್ಣಗೊಂಡ, ಕಡಲಿನ ಕಾಡುಗಳ ಆ ಅತ್ಯಂತ ವಿಸ್ತೃತ ಅಧ್ಯಯನದ ವರದಿ ಕೆಲ ತಿಂಗಳುಗಳ ಹಿಂದಿನ (ಸೆಪ್ಟೆಂಬರ್ 2022) ಕಾನ್ಸರ್ವೇಷನ್ ವಾರ್ತಾಪತ್ರದಲ್ಲಿ ಪ್ರಕಟಗೊಂಡಿದೆ.

ಆ ವರದಿಯ ಅತ್ಯಂತ ಪ್ರಮುಖ ಅಂಶಗಳು

- ದಕ್ಷಿಣ ಆಫ್ರಿಕಾದ ಕಡಲಂಚಿನ 'ದಿ ಗ್ರೇಟ್ ಫಾರೆಸ್ಟ್', ಆಸ್ಟ್ರೇಲಿಯಾದ 'ದಿ ಗ್ರೇಟ್ ಸದರ್ನ್ ರೀಫ್' ಇತ್ಯಾದಿ ಬೃಹತ್ ವೈಶಾಲ್ಯದ ಅಡವಿಗಳೂ ಸೇರಿದಂತೆ ಪ್ರಸ್ತುತ ಜಗದಾದ್ಯಂತ ಅಸ್ತಿತ್ವದಲ್ಲಿರುವ ಸಾಗರ ಅರಣ್ಯಗಳ ಒಟ್ಟು ವಿಸ್ತಾರ ಏಳು ದಶಲಕ್ಷ ಚದರ ಕಿಲೋಮೀಟರ್! ಎಂದರೆ ದಕ್ಷಿಣ ಅಮೆರಿಕದ ಅಮೆಜಾನಿಯಾ ವೃಷ್ಟಿವನದ ವಿಸ್ತಾರಕ್ಕಿಂತ ಹೆಚ್ಚು!
- ಸಾಗರದ ಕಾನನಗಳನ್ನು ರೂಪಿಸಿರುವ ಸಾಗರ ಶೈವಲಗಳಲ್ಲಿ (ಮ್ಯಾಕ್ರೋ ಆಲ್ಗೇ) ಸಾವಿರಾರು ಪ್ರಭೇದಗಳಿವೆ. ಅವು ಪ್ರಧಾನವಾಗಿ ತ್ರಿವಿಧಗಳಲ್ಲಿವೆ: ಕೆಂಪು ಶೈವಲ (ರೋಡೋ ಫೈಟಾ), ಬೂದು ಶೈವಲ (ಫೇಯೋಫೈಟಾ) ಮತ್ತು ಹಸಿರು ಶೈವಲ (ಕ್ಲೋರೋಫೈಟಾ). ಕಡಲ ಶೈವಲಗಳು ಅತ್ಯಂತ ವೇಗವಾಗಿ ಬೆಳೆವ (ದಿನಕ್ಕೆ ಒಂದೂವರೆ ಅಡಿ ಉದ್ದ ಬೆಳೆವ) ಸಸ್ಯಗಳಾಗಿವೆ! ಹಾಗಾಗಿ ಅವು ಆಹಾರ ಬೆಳೆಗಳಾದ ಭತ್ತ, ಗೋಧಿ, ಮೆಕ್ಕೆ ಜೋಳ, ಸೋಯಾ, ತಾಳೆ ಇತ್ಯಾದಿಗಳಿಗಿಂತಲೂ ಬಹಳ ಪಟ್ಟು ಹೆಚ್ಚು ಜೈವಿಕ ರಾಶಿ (ಬಯೋ ಮಾಸ್) ಉತ್ಪಾದಿಸುವ ಸಸ್ಯಗಳಾಗಿವೆ. ಈ ಕಾರಣದಿಂದ ಅವು ಕಡಲಿಗೆ ಮಾನವ ಮೂಲಗಳಿಂದ ಬೆರೆಯುವ ಇಂಗಾಲವನ್ನು ಅತ್ಯಧಿಕ ಪ್ರಮಾಣದಲ್ಲಿ ಹೀರಿಕೊಳ್ಳುತ್ತವೆ. ತನ್ಮೂಲಕ ಸಾಗರದ ಮತ್ತು ಇಡೀ ಸಾಗರ ಜೀವಜಾಲದ ಸಂರಕ್ಷಣೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ.




- ಕಡಲಿನ ಅಡವಿಗಳ ಪ್ರಧಾನ ಸಸ್ಯಗಳಾದ ಕಡಲ ಕಳೆಗಳು ಮನುಷ್ಯರಿಗೂ ಉತ್ತಮ ಪೌಷ್ಟಿಕ ಆಹಾರಮೂಲ ಆಗಬಲ್ಲವಾಗಿವೆ. ಹಾಗಾಗಿ ಭವಿಷ್ಯದಲ್ಲಿ ಉದ್ಭವಿಸಲಿರುವ ಆಹಾರ ಕೊರತೆಯನ್ನು ನೀಗಿಸಲು ಅವು ಸಮರ್ಥವಾಗಿವೆ.

■ ಎನ್. ವಾಸುದೇವ್